| 2006–07ನೇ ಸಾಲಿನಲ್ಲಿ ಕೈಗೊಳ್ಳಲಾಗುತ್ತಿರುವ ಹೊಸ ಕಾಮಗಾರಿಗಳು: | | | | | |
|---|---|---|---|---|---|
| 1 | ಕನ್ನೊಳ್ಳಿ ಹತ್ತಿರ ಜಿನುಗು ಕೆರೆ (ಸೈಟ್–1) | 40.00 | 45 | – | ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ |
| 2 | ಸಾವಳಗಿ ಹತ್ತಿರ ಜಿನುಗು ಕೆರೆ | 34.00 | 40 | – | ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ |
| 3 | ತುಂಗಳ ಹತ್ತಿರ ಜಿನುಗು ಕೆರೆ | 30.00 | 40 | – | – " – |
| 4 | ತುಂಗಳ ಹತ್ತಿರ ನವಲಿ ಹತ್ತಿರ ಜಿನುಗು ಕೆರೆ | 50.00 | 45 | – | – " – |
| 5 | ಕುರುಗೊಡ (ಸೈಟ್–2) ಹತ್ತಿರ ಜಿನುಗು ಹತ್ತಿರ | 35.00 | 40 | – | – " – |
| 6 | ನವಲಗಿ ಹತ್ತಿರ ಜಿನುಗು ಕೆರೆ | 0.00 | 0 | – | ಸರ್ವೆ ಕೆಲಸ ನಡೆದಿದೆ. |
| 7 | ಚಿಮ್ಮಡ ಹತ್ತಿರ ಕೆರೆ | 0.00 | 0 | – | – " – |
| | ಒಟ್ಟು | 129.00 | 210 | – | |

274 (609) – ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) – ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರು ತಾಲ್ಲೂಕಿನಲ್ಲಿ ನೀರಾವರಿ ಕೃಷಿ ಭೂಮಿ ಅತೀ ಕಡಿಮೆ ಇರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಕೃಷಿ ಮಾಡಲು ವರದಾ ನದಿಯಿಂದ ಏತ ನೀರಾವರಿ ಮೂಲಕ ನೀರೊದಗಿಸಿ ರೈತರಿಗೆ ಅನುಕೂಲ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ ;

ಆ) ಹಾಗಿದ್ದಲ್ಲಿ, ವರದಾ ನದಿಯಿಂದ ಏತ ನೀರಾವರಿ ಮೂಲಕ ತವರಮೆಳ್ಳಿಹಳ್ಳಿ ಮತ್ತು ಹತ್ತಿಮತ್ತೂರ ಗ್ರಾಮದ ಕೆರೆಯನ್ನು ತುಂಬಿಸಿದರೆ ಅನುಕ್ರಮವಾಗಿ ಸುಮಾರು 106 ಮತ್ತು 82 ಹೆಕ್ಟೇರ್ ನೀರಾವರಿ ಜಮೀನಾಗುವುದು ಸರ್ಕಾರದ ಗಮನದಲ್ಲಿದೆಯೇ ;

ಇ) ಕಳಸೂರ ಗ್ರಾಮದ ಹತ್ತಿರ ಇರುವ ವರದಾ ನದಿಗೆ 1993ರಲ್ಲಿ ಬಾಂಧಾರದ ಶಿಲಾನ್ಯಾಸ ಮಾಡಿ ಸನ್ 1998ರ ಮೌಲ್ಯ ನಿರ್ಣಯ 9ನೇ ಸಮಿತಿಯಲ್ಲಿ ಇದಕ್ಕೆ ಅನುಮೋದನೆ ದೊರೆತು, ಸನ್ 1999-2000ನೇ ಸಾಲಿನ ಆಯವ್ಯಯದಲ್ಲಿ ಸದರಿ ಬಾಂಧಾರ ಕಾಮಗಾರಿಗೆ ರೂ. 20 ಲಕ್ಷ ಒದಗಿಸಲಾಗಿದ್ದರೂ ಇದಕ್ಕೆ ಇದುವರೆವಿಗೂ ಆಡಳಿತಾತ್ಮಕ ಅನುಮೋದನೆ ದೊರೆಯದೇ ಇರಲು ಕಾರಣವೇನು ;

ಈ) ಹಾಗಿದ್ದಲ್ಲಿ, ಈ ಎಲ್ಲಾ ಕಾಮಗಾರಿಗಳಿಗೆ ತೀವ್ರಗತಿಯಲ್ಲಿ ಹಣ ಬಿಡುಗಡೆಗೊಳಿಸಿ ಕಾರ್ಯರೂಪಕ್ಕೆ ತರಲು ಸರ್ಕಾರ ಕ್ರಮಕೈಗೊಳ್ಳುವುದು ಯಾವಾಗ ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)–

ಅ) ಶಿಗ್ಗಾಂವ–ಸವಣೂರ ತಾಲ್ಲೂಕಿನಲ್ಲಿ ಮೋತಿ ತಲಾಬ ಏತ ನೀರಾವರಿ ಯೋಜನೆ ಕಾಮಗಾರಿ ಪ್ರಗತಿಯಲ್ಲಿದ್ದು ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ. ಈ ಯೋಜನೆಯಿಂದ 180 ಹೆಕ್ಟೇರ್ ಪ್ರದೇಶಕ್ಕೆ ನೀರೊದಗಿಸಬಹುದು.

ಆ) ಪ್ರಸ್ತುತ ಇಂತಹ ಪ್ರಸ್ತಾವನೆ ಇರುವುದಿಲ್ಲ.

ಇ) ಅನುದಾನದ ಕೊರತೆಯಿಂದಾಗಿ ಕಳಸೂರು ಬಂದಾರ ನಿರ್ಮಾಣ ಕಾಮಗಾರಿಯನ್ನು 1993–94ನೇ ಸಾಲಿನಿಂದ ಆಡಳಿತಾತ್ಮಕ ಅನುಮೋದನೆ ನೀಡಲು ಸಾಧ್ಯವಾಗಿರಲಿಲ್ಲ. ಪ್ರಸ್ತುತ 2006–07ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಲಾಗಿರುವ ಪೂರಕ ಅನುದಾನದಲ್ಲಿ ಈ ಕಾಮಗಾರಿಯನ್ನು ಹಾವೇರಿ ತಾಲ್ಲೂಕಿನ ಕೋಳೂರು ಗ್ರಾಮದ ಬಳಿ ವರದಾ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಎಂಬ ನಾಮಾಂಕಿತದಿಂದ ಕೈಗೊಳ್ಳಲಾಗುತ್ತಿದೆ.

ಈ) ಅನುದಾನ ಒದಗಿಸಿಕೊಂಡಿರುವುದರಿಂದ ತ್ವರಿತವಾಗಿ ಈ ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.